# ಕೆ.ಸಿ.ಡಿ. ಸಮಾಚಾರ

ಶಿಕ್ಷಣ-ಸಂಸ್ಕೃತಿ-ಸಮಾಜ ನಮ್ಮ ಧ್ಯೇಯ, ನಿಷ್ಠೆ

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

KCD JOURNALISM CLUB DHARWAD

ಕರ್ನಾಟಕ ಮಹಾವಿದ್ಯಾಲಯ ಧಾರವಾಡ 100 Years Centenary Celebration 2017-18 KARNATAK COLLEGE DHARWAD

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ:20 ಸಂಪುಟ:4 ಪುಟ:2

@KACD100 @Ksamachar Kcdsamachara@gmail.com Readers can view at Kcd2017.blogspot.in


## ಬೆಳಕು

ದುಃಖವೆನ್ನುವುದು ಅತ್ಯಂತ ಸಹಜ ಎಂಬುದನ್ನರಿತು ಸಹಿಸುವ ಶಕ್ತಿಯನ್ನು ಹೆಚ್ಚಿಸಿಕೊಂಡಾಗ ಪ್ರತಿ ದುಃಖವೂ ಮುಂದಿನ ಸುಖಕ್ಕೆ ಮೂಲವಾಗುತ್ತದೆ.

## Unbelievable facts.



A report Stated that India is the Most Dangerous country to Take birth as a girl. Every 10 minutes a girl related crime happens in India. Every year these crimes are increasing. 9 out 10 girls thinks Their Life Would be more easier if they were born as a boy. This is Serious, A change is Needed!!

## ನಗೆ ಹೊನಲು




# ತಂತ್ರಜ್ಞಾನದಿಂದ ಕಲಿಕಾ ಮಟ್ಟವನ್ನು ಹೆಚ್ಚಿಸಬಹುದು: ಪ್ರೊ. ತೇಜಸ್ವಿ ಕಟ್ಟಿಮನಿ

ದೇಶದ ಒಬ್ಬ ಸಾಮಾನ್ಯ ವ್ಯಕ್ತಿ ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯದ ಕುಲಪತಿಯಂತಹ ಉನ್ನತ ಸ್ಥಾನ ಅಲಂಕರಿಸಬೇಕಾದರೆ ಅದಕ್ಕೆ ಕಾರಣ ಡಾ ಬಾಬಾ ಸಾಹೇಬ ಅಂಬೇಡ್ಕರ್ ಅವರು ನೀಡಿದ ಸಂವಿಧಾನ ಎಂದು ಮಧ್ಯಪ್ರದೇಶ ಅಮರಕಂಟಕದ ಇಂದಿರಾಗಾಂಧಿ ರಾಷ್ಟ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ತೇಜಸ್ವಿ ಕಟ್ಟಿಮನಿ ಅಭಿಪ್ರಾಯಪಟ್ಟರು. ಅವರು ನಗರದ ಕರ್ನಾಟಕ ಕಲಾ ಮಹಾವಿದ್ಯಾಲಯದ ಸೃಜನಾ ರಂಗಮಂದಿರದಲ್ಲಿ ಆಯೋಜಿಸಿದ ಜಿಮಖಾನಾದ 2017–18ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನೆ ನೇರವೇರಿಸಿ ಮಾತನಾಡುತ್ತಿದ್ದರು.

ಭಾರತೀಯ ಸಂವಿಧಾನದ ಆಶೋತ್ತರಗಳು ಪ್ರತಿಯೊಬ್ಬರಿಗೆ ಸಮಾನ ಅವಕಾಶಗಳನ್ನು ನೀಡಿದ್ದು, ಇಂದು ಸಾಮಾನ್ಯ ಪ್ರಜೆ ಮೋದಿ ಅವರು ಇಂದು ಭಾರತದ ಪ್ರಧಾನ ಮಂತ್ರಿ ಆಗಲು ಸಾಧ್ಯವಾಯಿತು ಎಂದ ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ನನ್ನ ವೃತ್ತಿ ಪ್ರಾರಂಭಿಸಿದ ನಂತರ ನಾನು ನನ್ನ ವೃತ್ತಿಯ ಜತೆಗೆ ಕಲಿಯಲು ಪ್ರಾರಂಭಿಸಿದ್ದು, ಇಂದು ನಾನು ಈ ಉನ್ನತ ಸ್ಥಾನದಲ್ಲಿ ಇರಬೇಕಾದರೆ ಅದು ಕರ್ನಾಟಕ ಕಾಲೇಜಿನಿಂದ ಪಡೆದದ್ದು ಎಂದು ನುಡಿದರು. ಪ್ರಸ್ತುತ ಭಾರತದಲ್ಲಿ ಮೆಕಾಲೆ ಆಧಾರಿತ ಶಿಕ್ಷಣವನ್ನು ನೀಡಲಾಗುತ್ತಿದ್ದು ಈ ಶಿಕ್ಷಣ ಪದ್ಧತಿಯಿಂದ ಯಾವದೇ ರೀತಿಯಿಂದ ಸಮುದಾಯಕ್ಕೆ ಲಾಭವಿಲ್ಲ ಆದ್ದರಿಂದ ಇಂದು ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳು ಕೌಶಲ ಆಧಾರಿತ ಶಿಕ್ಷಣವನ್ನು ಇಂದಿನ ಯುವಜನತೆಗೆ ನೀಡಬೇಕಾಗಿದೆ ಎಂದರು.



ನಗರದ ಕರ್ನಾಟಕ ಕಲಾ ಮಹಾವಿದ್ಯಾಲಯದ ಸೃಜನಾ ರಂಗಮಂದಿರದಲ್ಲಿ ಆಯೋಜಿಸಿದ ಜಿಮಖಾನಾದ 2017–18ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಧ್ಯಪ್ರದೇಶ ಅಮರಕಂಟಕದ ಇಂದಿರಾಗಾಂಧಿ ರಾಷ್ಟ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಕಲಪತಿ ಪ್ರೊ. ತೇಜಸ್ವಿ ಕಟ್ಟಿಮನಿ ಅವರನ್ನು ಕಾಲೇಜಿನ ವತಿಯಿಂದ ಸನ್ಮಾನಿಸಲಾಯಿತು.

ಇಂದು ಶಿಕ್ಷಣ ಕ್ಷೇತ್ರದ ಪರಿಣಿತರು ಮತ್ತು ಶಿಕ್ಷಕರು ಹೊಸ ಸಂವಹನ ಮಾಹಿತಿ ತಂತ್ರಜ್ಞಾನವನ್ನು ಇಂದಿನ ಪಠ್ಯಕ್ರಮದಲ್ಲಿ ಅಳವಡಿಸುವದು ಸೂಕ್ತ ಎಂದ ಅವರು ಆಧುನಿಕ ಸಂವಹನ ತಂತ್ರಜ್ಞಾನದಿಂದ ಕಲಿಕಾ ಮಟ್ಟವನ್ನು ಹಚ್ಚಿಸಬಹುದು ಮತ್ತು ಇಂದಿನ ಯುವಕರು ಸಾಮಾಜಿಕ ಮಾಧ್ಯಮಗಳನ್ನು ಸಮರ್ಪಕವಾಗಿ ತಮ್ಮ ಕಲಿಕೆಯಲ್ಲಿ ಸಹ ಬಳಸಬಹುದು ಎಂದು ವಿವರಿಸದ ಅವರು ಇಂದು ಪದವಿ ಮತ್ತು ಕಲಿಕೆಗೆ ಯಾವದೇ ಅರ್ಥವಿಲ್ಲವಾಗಿದೆ ಆದ್ದರಿಂದ ಇದೊಂದು ಗಂಭಿರವಾದ ವಿಷಯವಾಗಿದ್ದು, ಶಿಕ್ಷಕರು ಭೋಧನೆಯಲ್ಲಿ ಜ್ಞಾನದ ಜತೆಗೆ ತಂತ್ರಜ್ಞಾನವನ್ನು ಮೈಗೂಡಿಸಿಕೂಳ್ಳುವದು ಅವಶ್ಯಕ ಎಂದರು.ನಮ್ಮ ಶಿಕ್ಷಣವು ನಮ್ಮ ಜೀವನದ ಕನಿಷ್ಠ ಆರ್ಥಿಕ ಮಟ್ಟವನ್ನು ಪೂರೈಸುವಂತಹ ಶಿಕ್ಷಣವಾಗಬೇಕು ಜತೆಗೆ ನಮ್ಮ ಭಾರತೀಯ ಸಂಪ್ರದಾಯ ಕಾವ್ಯ ಇತಿಹಾಸ ಪರಂಪರೆಯನ್ನು ತಿಳಿಸಿಕೂಡುವ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ನೀಡಬೇಕು ಎಂದು ಅಭಿಪ್ರಾಯಪಟ್ಟರು. ವಿದ್ಯಾರ್ಥಿಗಳು ಮಾತೃಭಾಷೆಯ ಜತೆಗೆ ಇಂಗ್ಲೀಷ್ ಹಿಂದಿ ಭಾಷೆಗಳನ್ನು ತಿಳಿದು ಕೂಳ್ಳುವದು ಅವಶ್ಯಕ. ಗ್ರಾಮೀಣ ಹಿನ್ನಲೆಯಿಂದ ಬಂದ ವಿದ್ಯಾರ್ಥಿಗಳು ಕೀಳಿರಿಮೆಯನ್ನು ತೂಡೆದು ಹಾಕುವದರಿಂದ ನಿವೆಲ್ಲರೂ ಸಹ ಉನ್ನತ ಸ್ಥಾನದಲ್ಲಿ ತಲುಪಬಹುದು ಎಂದು ಸಲಹೆ ನೀಡದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಮಖಾನಾದ ಉಪಧ್ಯಕ್ಷರಾದ ಬಿ.ಎಫ್. ಚಾಕಲಬ್ಬಿ ಮಾತನಾಡಿ ಕರ್ನಾಟಕ ಕಾಲೇಜು ಶತಮಾನೋತ್ಸವದ ಸಂಭ್ರಮದಲ್ಲಿ ಇದ್ದು ಈ ಸಂದರ್ಭದಲ್ಲಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯರಾ ಡಾ ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ಕರ್ನಾಟಕ ಕಲಾ ಮಹಾವಿದ್ಯಾಲಯವು ದೇಶದ ಒಂದು ಪ್ರತಿಷ್ಠಿತ ಮಹಾವಿದ್ಯಾಲಯವಾಗಿದ್ದು, ಈ ಕಾಲೇಜು ಕುಲಪತಿಗಳನ್ನು, 3 ಜ್ಞಾನಪೀಠ ಪುರಸ್ಕೃತ ಸಾಹಿತಿಗಳನ್ನು ಮತ್ತು ಶ್ರೀರಂಗ ಗಿರೀಶ ಕಾರ್ನಾಡರಂತಹ ಮಹನೀಯರನ್ನು ರೂಪಿಸದ ಮಹಾವಿದ್ಯಾಲಯ ಎಂದು ಹೇಳಿಕೂಳ್ಳಲು ಹೆಮ್ಮೆ ಎನಿಸುತ್ತದೆ ಎಂದ ಅವರು ಇದು 100ನೇ ಜಿಮಖಾನಾ ಕಾರ್ಯಕ್ರಮವಾಗಿರುವದು ವಿಶೇಷ ಎಂದರು.

ಕಾರ್ಯಕ್ರಮದಲ್ಲಿ ಅಮರಕಂಟಕ ಇಂದಿರಾಗಾಂಧಿ ರಾಷ್ಟ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರಾದ ಡಾ ಬಸವರಾಜ ಡೊಣೂರ, ಡಾ ಡಿ.ಎಂ.ಹಿರೇಮಠ, ಅಮಿನಗಡ, ಡಾ ಅರುಣಾ ಹಳ್ಳಕೇರಿ ವಿದ್ಯಾರ್ಥಿ ಕಾರ್ಯದರ್ಶಿ ಯಲ್ಲಪ್ಪ ವೈ.ಕೆ ಸೇರಿದಂತೆ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಧ್ಯಾಪಕರು ಮತ್ತು ಕಾಲೇಜಿನ ವಿವಿಧ ವಿಭಾಗಗಳ ಜಿಮಖಾನಾದ ಕಾರ್ಯಾಧ್ಯಕ್ಷರು ,ವಿದ್ಯಾರ್ಥಿ ಕಾರ್ಯದರ್ಶಿಗಳು ಅಪಾರ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಜ–ರಿದ್ದರು.

# ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಜ್ಞಾನ ಮತ್ತು ತರಬೇತಿ ಬಹಳ ಮುಖ್ಯ

ಪತ್ರಿಕೋದ್ಯಮ ವಿದ್ಯಾರ್ಥಿಗಳು ಹೆಚ್ಚು ಪ್ರಾಯೋಗಿಕ ಜ್ಞಾನಕ್ಕೆ ಹೆಚ್ಚು ಒತ್ತು ನೀಡಬೇಕು ಎಂದು ಧಾರವಾಡ ಆಕಾಶವಾಣಿ ಸಹಾಯಕ ನಿಲಯ ನಿರ್ದೇಶಕ ಸತೀಶ ಪರ್ವತೀಕರ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರನ್ ಸಭಾಂಗಣದಲ್ಲಿ ಪ್ರತಿಕೋದ್ಯಮ ವಿಭಾಗದ ಬಿ.ಎ ಪ್ರಥಮ ವರ್ಷದ ಪತ್ರಿಕೋದ್ಯಮದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಮತ್ತು ಕಮ್ಯುನಿಕೇಶನ್ ಕ್ಲಬ್ ಕಾರ್ಯಚಟುವಟಕೆಗಳಿಗೆ ಚಾಲನೆ ನೀಡಿ ಮಾತನಾಡುತ್ತಿದ್ದರು.

ಇಂದು ರೇಡಿಯೋ ಮಾಧ್ಯಮ ಸಂಪೂರ್ಣ ಪ್ರಾಯೋಗಿಕ ಆಧಾರದ ಮೇಲೆ ಕಾರ್ಯಕ್ರಮಗಳು ನಿರ್ಮಾಣವಾಗುತ್ತಿವೆ ಆದ್ದರಿಂದ ಮಾಧ್ಯಮ ವಿದ್ಯಾರ್ಥಿಗಳಿಗೆ ಪ್ರಾಯೋಗಿ ಜ್ಞಾನ ಮತ್ತು ತರಬೇತಿ ಬಹಳ ಮುಖ್ಯ ಎಂದರು.ಇಂದು ವಿದ್ಯಾರ್ಥಿಗಳು ಸಮಯ ಪ್ರಜ್ಞೆ ಮತ್ತು ಗು–ರಿಯನ್ನು ಹೂಂದುವದು ತುಂಬಾ ಅವಶ್ಯಕ. ವಿದ್ಯಾರ್ಥಿಗಳು ಸಿಕ್ಕ ಅವಕಾಶಗಳನ್ನು ಸರಿಯಾಗಿ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಪತ್ರಿಕೋದ್ಯಮ ವಿಭಾಗದ ಸಹಾಯಕ ಉಪನ್ಯಾಸಕ ಡಾ ಪ್ರಭಾಕರ ಕಾಂಬಳೆ ಪ್ರಾಸ್ತಾವಿಕವಾಗಿ ಮಾತನಾಡಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಪತ್ರಿಕೋದ್ಯಮ ವಿಭಾಗದಿಂದ ಕೆಸಿಡಿ ಸಮಾಚಾರ ಎಂಬ ಪ್ರಾಯೋಗಿಕ ಪತ್ರಿಕೆಯನ್ನು ಹೊರತರುವದರ ಜತಗೆ ವಿದ್ಯಾರ್ಥಿಗಳ ವೃತ್ತಿಪರ ಕೌಶಲ್ಯಗಳನ್ನು ವೃದ್ಧಿಸುವಲ್ಲಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುವದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಕಾಲೇಜಿನ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ಪತ್ರಿಕೋದ್ಯಮದ ವಿದ್ಯಾರ್ಥಿಗಳು ಭಾಷಾ ಬಳಕೆಯನ್ನು ವೃದ್ಧಿಸಿಕೂಳ್ಳಬೇಕು ಮತ್ತು ಸಮಾಜಮುಖಿ ಚಿಂತನೆಗಳನ್ನು ಅಳವಡಿಸಿಕೂಳ್ಳಬೇಕು ಎಂದು ಸಲಹೆ ನೀಡಿದರು. ಅಕ್ಷತಾ ಪಾಠಕ್ ಅತಿಥಿಗಳನ್ನು ಪರಿಚಯಿಸಿದರು. ಶ್ವೇತಾ ಚಿನ್ನಳ್ಳಿ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಪತ್ರಿಕೋದ್ಯಮದ ಕಮ್ಯುನಿಕೇಶನ್ ಕ್ಲಬ್‌ನ ವಿದ್ಯಾರ್ಥಿ ಕಾರ್ಯದರ್ಶಿಗಳಾದ ಶ್ರೀನಿವಾಸ ಗುಳೆದ್ ಸೌಂದರ್ಯ ಕುರಕುರಿ, ಹೇಮಕುಮಾರ ಇದ್ದರು. ಕಾರ್ಯಕ್ರಮವನ್ನು ಮಂಜುನಾಥ ಮತ್ತು ಸಂಜು ಕೋಟಿ ನಿರ್ವಹಿಸಿದರು. ಸೌಮ್ಯ ಕುಲಕರ್ಣಿ ವಂದಿಸಿದರು.



ಧಾರವಾಡ ಆಕಾಶವಾಣಿ ಸಹಾಯಕ ನಿಲಯ ನಿರ್ದೇಶಕರಾದ ಸತೀಶ ಪರ್ವತೀಕರ ಅವರು ಕರ್ನಾಟಕ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಕಮ್ಯುನಿಕೇಶನ್ ಕ್ಲಬ್‌ನ ಕಾರ್ಯಚಟುವಟಿಕೆಗಳಿಗೆ ಚಾಲನೆ ನೀಡುತ್ತಿರುವದು. ಚಿತ್ರದಲ್ಲಿ ಡಾ ರವೀಂದ್ರ ಜಲರಡ್ಡಿ, ಡಾ ರಾಜೇಶ್ವರಿ ಮಹೇಶ್ವರಯ್ಯ, ಡಾ ಪ್ರಭಾಕರ್ ಕಾಂಬಳೆ ಮತ್ತು ವಿದ್ಯಾರ್ಥಿ ಕಾರ್ಯದರ್ಶಿಗಳನ್ನು ಚಿತ್ರದಲ್ಲಿ ಇದ್ದಾರೆ.

# ಪರಿಶ್ರಮದಿಂದ ತಮ್ಮನ್ನು ಕೆಲಸದಲ್ಲಿ ತೊಡಗಿಸಿಕೊಂಡರೆ ಖಂಡಿತ ಯಶಸ್ಸು ಸಾಧ್ಯ

ಅಂಗವಿಕಲತೆ ಅದು ಶಾಪವಲ್ಲ ಅದು ದೇವರು ಕೊಟ್ಟ ವರ ಯಾಕೆಂದರೆ ವಿಕಲತೆಯ ಜೊತೆ ವಿಶೇಷ ಶಕ್ತಿಯನ್ನು ಅವನು ನೀಡಿರುತ್ತಾನೆ. ಎಂದು ಹಳಿಯಾಳದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ವಿಠ್ಠಲ ಕಿತ್ತೂರ ಅಭಿಪ್ರಾಯಪಟ್ಟರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರನ್ ಸಭಾಂಗಣದಲ್ಲಿ ಸೋಮವಾರದಂದು ನಡೆದ 'ಆಸರ' ಎಂಬ ದಿವ್ಯಾಂಗ ಚೇತನರ ವೇದಿಕೆಯನ್ನು ಉದ್ಘಾಟಿಸಿ ಮಾತನಾಡಿದರು.

ವಿಕಲಚೇತನ ಹೊಂದಿದ ಮಕ್ಕಳು ಧೃಡತೆ ಸ್ಥಿರತೆ ಮತ್ತು ಪರಿಶ್ರಮದಿಂದ ತಮ್ಮನ್ನು ಅಧ್ಯಯನಲ್ಲಿ ತೊಡಗಿಸಿಕೊಂಡರೆ ಖಂಡಿತ ಯಶಸ್ಸು ಸಾಧ್ಯ ಎಂದ ಅವರು ಇಂದು ವಿಕಲಚೇತನರಿಗೆ ಅನುಕಂಪ ಬೇಡ ಅವರಿಗೆ ಅವಕಾಶಗಳನ್ನು ನೀಡಬೇಕಾಗಿದೆ, ಸಮಾಜದಲ್ಲಿ ಅವರನ್ನು ನೋಡುವ ದೃಷ್ಟಿಕೋನ ಬದಲಾಗಬೇಕು ಎಂದರು.

ಪ್ರಾಸ್ತಾವಿಕವಾಗಿ ಸಮಾಜಶಾಸ್ತ್ರಜ್ಞ ಪ್ರೊ. ಈರಣ್ಣ ಮುಳಗುಂದ ಮಾತನಾಡಿ 2011ರ ಜನಗಣತಿಯ ಪ್ರಕಾರ ಇಂದು ಭಾರತದಲ್ಲಿ ಅಂಗವಿಕಲರು 21 ದಶಲಕ್ಷ ವಿಕಲಚೇತನರು ಇದ್ದು, ಭಾರತದ ಒಟ್ಟು ಜನಸಂಖ್ಯೆಯ ಶೇಕಡಾ 2.1 ಪ್ರತಿಶತ ಅಂಗವಿಕಲು ಇದ್ದಾರೆ ಎಂದ ಅವರು ಇದರಲ್ಲಿ 12.6 ರಷ್ಟು ಪುರುಷರು ಮತ್ತು 9.2 ಪ್ರತಿಶತ ಮಹಿಳೆಯರು ಇದ್ದಾರೆ ಎಂದು ವಿವರಿಸದ ಅವರು ಇಂದು ಹೆಚ್ಚಾಗಿ ರಕ್ತ ಸಂಬಂಧಗಳಲ್ಲಿ ಮದುವೆಗಳು ಆಗುವದರಿಂದ ಅಂಗವಿಕಲ ಮಕ್ಕಳು ಜನಿಸುತ್ತವೆ ಎಂದು ಉಲ್ಲೇಖಿಸಿದರು.

ಅಂಗವಿಕಲರ ಏಳಗೆಗಾಗಿ ಶ್ರಮಿಸುತ್ತಿರುವ ನಗರದ ಸಾಹಿತಿ ರಾಮಚಂದ್ರ ಧೊಂಗಡೆ ಮಾತನಾಡಿ ಅಂಗವಿಕಲತೆಯನ್ನು ಮೆಟ್ಟಿನಿಂತು ನಾವು ಸಬಲರು ಎಂದು ತೋರಿಸಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡದ ಅವರು ಇಂದು ವಿಕಲಚೇತನ ಮಕ್ಕಳಿಗೆ ಅನೇಕ ಸಮಸ್ಯೆಗಳಾದ ಬ್ರೈಲ್ ಲಿಪಿಯಲ್ಲಿ ಪುಸ್ತಕಗಳ ಕೊರತೆ ಮತ್ತು ದೃಷ್ಟಿಮಾಂದ್ಯರಗಾಗಿ ಇರುವ ವಿಶೇಷ ಜಾಜ್ ಕಂಪ್ಯೂಟರ್ ಸಾಫ್ಟ್‌ವೇರ್, ಮತ್ತು ಅವರಿಗೆ ಪರೀಕ್ಷೆಯಲ್ಲಿ ಸಹಾಯಕರಾಗಿ ಲಿಪಿಕಾರರ ಸಮಸ್ಯಗಳನ್ನು ಬಗೆಹರಿಸಬೇಕಾಗಿದೆ ಆದ್ದರಿಂದ ನಗರದ ಕರ್ನಾಟಕ ಕಾಲೇಜಿನಲ್ಲಿ ಹೆಚ್ಚು ವಿಕಲಚೇತನ ವಿದ್ಯಾರ್ಥಿಗಳು ಇರುವದರಿಂದ ಪ್ರತ್ಯೇಕ ಬ್ರೈಲ್ ಗ್ರಂಥಾಲಯದ ಒದಗಿಸಬೇಕು ಎಂದು ಪ್ರಾಚಾರ್ಯ ಡಾ ರಾಜೇಶ್ವರಿ ಮಹೇಶ್ವರಯ್ಯ ಅವರಿಗೆ ಮನವಿ ಮಾಡಿಕೂಂಡರು.

ಕಾರ್ಯಕ್ರಮದಲ್ಲಿ ಕಾಲೇಜಿನ ದೃಷ್ಟಿ ಮಾಂದ್ಯ ವಿದ್ಯಾರ್ಥಿಗಳು ಮಾತನಾಡಿ ಕರ್ನಾಟಕ ಕಾಲೇಜಿನಲ್ಲಿ ಇದೊಂದು ವಿಶಿಷ್ಟವಾದ ದಿವ್ಯಾಂಗರಿಗಾಗಿ ಇರುವ ವೇದಿಕೆಯಾಗಿ ಇಂದು ಅಸ್ಥಿತ್ವಕ್ಕೆ ಬಂದಿರುವದು ಸಂತೋಷ ಎಂದು ಹರ್ಷ ವ್ಯಕ್ತಪಡಿಸಿದರು.

ಕಾರ್ಯಕ್ರಮ ಅಧ್ಯಕ್ಷತೆಯನ್ನು ವಹಿಸಿದ್ದ ಡಾ ರಾಜೇಶ್ವರಿ ಮಹೇಶರಯ್ಯ ಮಾತನಾಡಿ ಕರ್ನಾಟಕ ಕಾಲೇಜಿನ ಇತಿಹಾಸದಲ್ಲಿ ಇದೂಂದು ಚಾರಿತ್ರಿಕವಾದ ದಿನವಾಗಿದ್ದು, ಮಹಾನಗರದ ಈ ಕಾಲೇಜಿನಲ್ಲಿ ಅತಿ ಹೆಚ್ಚು ವಿಕಲಚೇತನ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ ಆದ್ದರಿಂದ ವಿಕಲಚೇತನರನ್ನು ಗಮದಲ್ಲಿಟ್ಟುಕೂಂಡು ಅವರಿಗೆ ಆತ್ಮ ವಿಶ್ವಾಸ ಹೆಚ್ಚಿಸಲು ಮತ್ತು ಎಲ್ಲರಂತಯೇ ನಾವು ಎಂಬ ಉದ್ದೇಶ ದಿಂದ ಅವರ ಬೆನ್ನೆಲಬಾಗಿ ಈ 'ಆಸರ' ಎಂಬ ವೇದಿಕೆಯನ್ನು ಕರ್ನಾಟಕ ಕಾಲೇಜಿನಲ್ಲಿ ಇಂದು ಅಸ್ಥಿತ್ವಕ್ಕೆ ಬಂದಿದ್ದು, ಬೇರಾವ ಕಾಲೇಜಿನಲ್ಲಿ ಇಲ್ಲದ ಈ ವೇದಿಕೆಯ ಮುಖಾಂತರ ದಿವ್ಯಾಂಗರ ಸರ್ವಾಂಗಿಣ ಅಭಿವೃದ್ಧಿಗೊಳಿಸುವದರ ಜೊತೆಗೆ ಇಲ್ಲಿ ಅವರಿಗಾಗಿ ಶೈಕ್ಷಣಿಕ ವಾತಾವರಣದ ಸೃಷ್ಟಿಸಲು ಈ ವೇದಿಕೆ ಸಹಾಯಕಾರಿಯಾಗಲಿದೆ ಎಂದರು.



**ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿವಿಕಲಚೇತನರಿಗಾಗಿ 'ಆಸರ' ಎಂಬ ವೇದಿಕೆಯನ್ನು ಸೋಮವಾರದಂದು ಉದ್ಘಾಟಿಸಲಾಯಿತು. ಚಿತ್ರದಲ್ಲಿ ಡಾ ಕಾಂಚನ ಗಾಂವಕರ ಡಾ ಈರಣ್ಣ ಮುಳಗುಂದ, ಡಾ ರಾಜೇಶ್ವರಿ ಮಹೇಶ್ವರಯ್ಯ, ರಾಮಚಂದ್ರ ಧೂಂಗಡೆ ಮತ್ತು ಸಹಾಯಕ ಪ್ರಾಧ್ಯಾಪಕ ವಿಠ್ಠಲ ಕಿತ್ತೂರ ಕಾಲೇಜಿನ ವಿಕಲಚೇತನ ವಿದ್ಯಾರ್ಥಿಗಳು**

ಕಾರ್ಯಕ್ರಮದಲ್ಲಿ ಪ್ರೊ. ಕಾಂಚನ ಗಾಂವಕರ ಡಾ. ಅಮೃತ ಯಾರ್ದಿ, ಡಾ ಮುಕುಂದ ಲಮಾಣಿ ಡಾ. ಸ್ಟೇಲ್ಲಾ ಸ್ಟಿವನ್ ಡಾ. ವಿಭಾವರಿ ಕುಲಕರ್ಣಿ ಮತ್ತು ಕರ್ನಾಟಕ ಕಲಾ ಮಹಾವಿದ್ಯಾಲಯಲದಲ್ಲಿ ಅಧ್ಯಯನ ಮಾಡುತ್ತಿರುವ ಪಿಯುಸಿ ಮತ್ತು ಪದವಿ ವಿಕಲಚೇತನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಕಾರ್ಯಕ್ರಮವನ್ನು ಕರ್ನಾಟಕ ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಡಾ ಮಹೇಶ ಪಾಟೀಲ್ ನಿರೂಪಿಸಿದರು. ಡಾ. ಎಸ್.ಎಸ್. ದಂಡಗಿಮಠ ವಂದಿಸಿದರು.

# ಛಲ ಮತ್ತು ಆತ್ಮವಿಶ್ವಾಸದಿಂದ ಸಾಧನೆ ಸಾಧ್ಯ: ಬಿ.ಎಸ್ ನ್ಯಾಮಗೌಡ




**ಹುಬ್ಬಳ್ಳಿ ಧಾರವಾಡ ನಗರ ಅಪರಾಧ ಮತ್ತು ಸಂಚಾರ ವಿಭಾಗದ ಸಹಾಯಕ ಪೋಲಿಸ ಆಯುಕ್ತರಾದ ಬಿ.ಎಸ್ ನ್ಯಾಮಗೌಡ ಕರ್ನಾಟಕ ಕಲಾ ಮಹಾವಿದ್ಯಾಲಯವು ಆಯೋಜಿಸಿದ ಕಾರ್ಯಕ್ರಮದಲ್ಲಿ ಮಾತನಾಡುತ್ತಿರುವದು. ಚಿತ್ರದಲ್ಲಿ ಪ್ರೊ. ಆರ್ ವಿ ಹೂರಡಿ, ಡಾ ರಾಜೇಶ್ವರಿ ಮಹೇಶ್ವರಯ್ಯ ಮತ್ತು ಸುರೇಶ ಹುಲ್ಲನ್ನವರ ಅವರು ಇದ್ದಾರೆ.**

ಅನೇಕ ವಿದ್ಯಾರ್ಥಿಗಳು ನಾನು ಹಳ್ಳಿಯಿಂದ ಬಂದವ, ನನಗೆ ಬಡತನವಿದೆ ಮತ್ತು ಕನ್ನಡ ಮಾಧ್ಯಮದ ವಿದ್ಯಾರ್ಥಿ ಎಂಬ ಕೀಳರಿಮೆಯಿಂದ ಮೊದಲು ಹೊರ ಬರಬೇಕು ಎಂದು ಹುಬ್ಬಳ್ಳಿ ಧಾರವಾಡ ನಗರ ಅಪರಾಧ ಮತ್ತು ಸಂಚಾರ ವಿಭಾಗದ ಸಹಾಯಕ ಪೋಲಿಸ ಆಯುಕ್ತರಾದ ಬಿ.ಎಸ್ ನ್ಯಾಮಗೌಡ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರನ್ ಸಭಾಂಗಣದಲ್ಲಿ ರಾಜ್ಯಶಾಸ್ತ್ರ ವಿಭಾಗ, ಸಾರ್ವಜನಿಕ ಆಡಳಿತ, ಮಾನವ ಹಕ್ಕುಗಳು ಮತ್ತು ವಿಶ್ವಸಂಸ್ಥೆ ಅಧ್ಯಯನ ಮಂಡಳಿಗಳ ಸಹಯೋಗದಲ್ಲಿ ವಿಭಾಗದ ವಾರ್ಷಿಕ ಕಾರ್ಯಚಟುವಟಿಕೆಗಳ ಉದ್ಘಾಟನೆ ಸಮಾರಂಭ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಇಂದು ವಿದ್ಯಾರ್ಥಿಗಳು ಜೀವನದಲ್ಲಿ ಏನಾದರೂ ಸಾಧಿಸುತ್ತೆನೆ ಎಂಬ ಛಲ ಮತ್ತು ಆತ್ಮವಿಶ್ವಾಸ ಹೊಂದಿದಾಗ ಮಾತ್ರ ಅದು ಸಾಧನೆ ಪೂರಕವಾದ ವಾತಾವರಣ ರೂಪಿಸಿಕೊಳ್ಳಲು ಸಾಧ್ಯ ಆದ್ದರಿಂದ ವಿದ್ಯಾರ್ಥಿ ಜೀವನದಲ್ಲಿ ಗೆಳೆಯುರು ಮತ್ತು ಅನೇಕರು ನಿಂದಿಸುವವರು ಇದ್ದಾರೆ. ಸ್ಟುಡೆಂಟ್ ಲೈಫ್ ಇಸ್ ಗೋಲ್ಡನ್ ಲೈಫ್ ಎಂಬ ಗಾದೆ ಮಾತಿದೆ ಆ ಮಾತಿನ ಅರ್ಥ ವಿದ್ಯಾರ್ಥಿ ಜೀವನವನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂದು ವಿವರಿಸಿದ ಅವರು ಇಂದು ಯುವ ಜನರು ಮೊಬೈಲ್ ಮತ್ತು ಸಾಮಾಜಿಕ ಮಾಧ್ಯಮ ಮತ್ತು ಅನೇಕ ಡ್ರಗ್ಸ್ ಮತ್ತು ಮದ್ಯ ವೆಸನದಂತಹ ಚಟಗಳಿಗೆ ಬಲಿಯಾಗುತ್ತಿದ್ದಾರೆ. ಆದ್ದರಿಂದ ಯಾವದೇ ರೀತಿಯ ಬಳಕೆ ಮತ್ತು ಹವ್ಯಾಸ ನಮ್ಮ ಬೆಳವಣಿಗೆಗೆ ಪೂರಕವಾಗಿರಬೇಕು ಎಂದ ಅವರು ಇಂದು ನಾನು ಡಿಸಿಪಿ ಆಗಿ ಈ ವೇದಿಕೆ ಮೇಲೆ ಮಾತನಾಡಲು ಈ ಕರ್ನಾಟಕ ಕಾಲೇಜಿನ ಎಲ್ಲ ಪ್ರಾಧ್ಯಾಪಕರ ಶ್ರಮ ಮತ್ತು ಇಲ್ಲಿಯ ಪೂರಕ ವಾತಾವರಣ ಕಾರಣ ಎಂದು ನೆನಪಿಸಿಕೂಂಡರು.

ಕಾರ್ಯಕ್ರಮವನ್ನುಉದ್ಘಾಟಿಸಿಮಾತನಾಡಿದಕರ್ನಾಟಕಕಲಾಮಹಾವಿದ್ಯಾಲಯದ ರಾಜ್ಯಶಾಸ್ತ್ರದ ನಿವೃತ್ತ ಪ್ರಾಧ್ಯಾಪಕರಾದ ಪ್ರೋ ಆರ್ ವಿ ಹೂರಡಿ ಮಾತನಾಡಿ ಇಂದು ಎಲ್ಲಡೆ ಭೌತಿಕವಾಗಿ ಸ್ವಚ್ಛತೆಯ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ ಇಂದು ಎಲ್ಲರ ಮನಸ್ಸುಗಳನ್ನು ಸ್ವಚ್ಛ ಮಾಡಬೇಕಾಗಿದೆ ಆದ್ದರಿಂದ ಇಂದು ಎಲ್ಲಡೆ ಜಾತಿ ಮತ್ತು ಧರ್ಮದಿಂದ ರಾಜಕೀಯ ಮಾಡುತ್ತಿರುವದು ವಿಷಾದಕರ ಸಂಗತಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ಇಂದು ಗುರುಗಳ ಮತ್ತು ಶಿಷ್ಯನ ಸಮಾಗಮ ಒಂದೇ ವೇದಿಕೆಯಲ್ಲಿ ಆಗಿದ್ದು ಇದು ಒಂದು ಅಪರೂಪದ ಘಗಳಿಗೆ ಎಂದ ಅವರು ಕರ್ನಾಟಕ ಕಲಾ ಮಹಾವಿದ್ಯಾಲಯವು ಶತಮಾನೋತ್ಸವದ ಸಂಭ್ರಮದಲ್ಲಿ ಇದ್ದು, ಇದೊಂದು ಇಲ್ಲಿ ಕಲಿತ ಹಳೆಯ ವಿದ್ಯಾರ್ಥಿಗಳಿಗೆ ಭಾಗವಹಿಸಲು ಒಂದು ಸುವರ್ಣ ಅವಕಾಶ ಎಂದರು.

ಈ ಸಂದರ್ಭದಲ್ಲಿ ಸಹಾಯಕ ಪೋಲಿಸ ಆಯುಕ್ತರಾದ ಬಿ.ಎಸ್ ನ್ಯಾಮಗೌಡ ಅವರನ್ನು ಕಾಲೇಜಿನ ವತಿಯಿಂದ ಸನ್ಮಾನಿಸಲಾಯಿತು. ಬಿ.ಎ ರಾಜ್ಯಶಾಸ್ತ್ರ ವಿಷಯದಲ್ಲಿ ಕಳೆದ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಬಿ,ಎ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳನ್ನು ಪುಷ್ಪಗುಚ್ಛ ನೀಡಿ ಸನ್ಮಾನಿಸಿಲಾಯಿತು.

ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ ಸುರೇಶ ಹುಲ್ಲನ್ನವರ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ರಾಜ್ಯಶಾಸ್ತ್ರ ವಿಷಯದ ಹಳೆಯ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಮತ್ತು ವಿವಿಧ ಅಧ್ಯಯನ ವಿಭಾಗಗಳ ಕಾರ್ಯದರ್ಶಿಗಳು ಹಾಜರಿದ್ದರು. ಪ್ರಾಧ್ಯಾಪಕರಾದ ಡಾ ಎಂ ಬಿ ದಳಪತಿ ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯಕ್ರಮವನ್ನು ಕಿರಣ ಮತ್ತು ಸವಿತಾ ನಿರೂಪಿಸದರು. ಕವಿತಾ ಲಮಾಣಿ ವಂದಿಸಿದರು.

ಗೌರವ ಸಂಪಾದಕರು: ಪ್ರಾಚಾರ್ಯರು ಡಾ. ರಾಜೇಶ್ವರಿ ಮಹೇಶ್ವರಯ್ಯ, ಸಂಚಿಕೆ ಸಂಪಾದಕರು: ಡಾ.ಪ್ರಭಾಕರ್ ಕಾಂಬಳೆ, ಡಾ.ರವೀಂದ್ರ ಜಲರೆಡ್ಡಿ, ವಿದ್ಯಾರ್ಥಿ ಸಂಪಾದಕರು: ಚೇತನ್,ನಿತಿನ್. ಪುಟ ವಿನ್ಯಾಸ: ಶ್ರೀಹರಿ.